ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (322)324
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ.(ಕುಣಿಗಲ್)
ಉತ್ತರಿಸುವ ಸಚಿವರ ಹೆಸರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ಕುಣಿಗಲ್ ವಿಧಾನ ಸಭಾ ಕ್ಷೇತ್ರಕ್ಕೆ ಬೇಡಿಕೆಯಿರುವ ಮತ್ತು ಹಾಲಿ ಪೂರೈಕೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು;

ಕುಣಿಗಲ್ ವಿಧಾನಸಭಾ ಕ್ಷೇತ್ರಕ್ಕೆ ಬೇಡಿಕೆಯಿರುವ ವಾರ್ಷಿಕ ಸರಾಸರಿ ವಿದ್ಯುತ್‌ನ ಪ್ರಮಾಣ 218.8 ದಶಲಕ್ಷ ಯೂನಿಟ್ಟುಗಳು. ಹಾಲಿ ಪೂರೈಕೆಯಾಗುತ್ತಿರುವ ವಿದ್ಯುತ್‌ನ ಪ್ರಮಾಣ 169.49 ದಶಲಕ್ಷ ಯೂನಿಟ್ಟುಗಳು. ರಾಜ್ಯ ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್ ನಿರ್ವಹಣೆ ಅನಿವಾರ್ಯವಾಗಿರುವುದರಿಂದ, ಕುಣಿಗಲ್ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ನಿರ್ವಹಿಸಬೇಕಾಗಿರುತ್ತದೆ.

ಆ) ಬೇಡಿಕೆಗನುಗುಣವಾಗಿ ವಿದ್ಯುತ್ ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಲಿ ಪೂರೈಕೆಯ ವಿದ್ಯುತ್ ಪ್ರಮಾಣದ ಮೌಲ್ಯವೆಷ್ಟು; ಬಳಕೆದಾರರುಗಳಿಂದ ಸಂಗ್ರಹಿಸುತ್ತಿರುವ ಬಾಬ್ತು ಎಷ್ಟು (ಕಳೆದ 3 ವರ್ಷಗಳ ಮಾಹಿತಿ ನೀಡುವುದು);

ಕುಣಿಗಲ್ ಉಪ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ವರ್ಗಗಳ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಪೂರೈಕೆಯಾಗುತ್ತಿದೆ. ಪ್ರತಿಯೊಂದು ವರ್ಗದ ವಿದ್ಯುತ್ ಬಳಕೆದಾರರಿಗೆ ಅನ್ವಯವಾಗುವ ವಿದ್ಯುತ್ ದರಗಳು ಏಕ ರೂಪದಲ್ಲರದೇ ಬೇರೆ ಇರುತ್ತದೆ.

ಕಳೆದ ವರ್ಷವಾದ 2007–08 ರಲ್ಲಿ ಪೂರೈಕೆ ಮಾಡಲಾದ ವಿದ್ಯುತ್‌ನ ಒಟ್ಟು ಮೌಲ್ಯ ರೂ.4096.94 ಲಕ್ಷಗಳು.

ಕಳೆದ ಮೂರು ವರ್ಷಗಳಲ್ಲಿ ವಿವಿಧ ವರ್ಗಗಳ ಬಳಕೆದಾರರಿಂದ ವಿದ್ಯುತ್ ಶುಲ್ಕದ ಬಾಬ್ತು ವಸೂಲಿ ಮಾಡಲಾದ ಮೊತ್ತದ ವಿವರಗಳು ಕೆಳಕಂಡಂತಿವೆ.

ವರ್ಷ	ಕಂದಾಯ ವಸೂಲಿ (ಲಕ್ಷ ರೂ.ಗಳಲ್ಲಿ)
2005–06	958.60
2006–07	1326.90
2007–08	3511.40

ಈ) ಸೋರಿಕೆಯಾಗುತ್ತಿರುವ ಮತ್ತು ಕಳವು ಮಾಡುತ್ತಿರುವ ವಿದ್ಯುತ್ ಪ್ರಮಾಣ ಮತ್ತು ಅದರ ಮೌಲ್ಯ ಎಷ್ಟು (ಕಳೆದ 3 ವರ್ಷಗಳ ಮಾಹಿತಿ ನೀಡುವುದು);

ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ವಿತರಣೆಯಲ್ಲಿನ ನಷ್ಟ, ಸೋರಿಕೆಯ ಪ್ರಮಾಣದ (ತಾಂತ್ರಿಕ ಮತ್ತು ವಾಣಿಜ್ಯ ನಷ್ಟ) ಹಾಗೂ ಕಳುವಿನ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ.

ವರ್ಷ	ವಿತರಣಾ ನಷ್ಟ, ಸೋರಿಕೆಯ ಹಾಗೂ ದಶಲಕ್ಷ ಯೂನಿಟ್ಟುಗಳಲ್ಲಿ	ವಿತರಣಾ ನಷ್ಟ/ಸೋರಿಕೆಯ ಮೌಲ್ಯ (ರೂ.ಲಕ್ಷಗಳಲ್ಲಿ)
2005–06	28.52	1049.54
2006–07	28.27	1074.26
2007–08	27.92	1072.13

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ವಿತರಣಾ ನಷ್ಟವನ್ನು ಕಡಿಮೆ ಮಾಡಲು ಕಳೆದ 3 ವರ್ಷಗಳಲ್ಲಿ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಂಡಿದೆ.

1. 1066 ಕಿ.ಮೀ. ಉದ್ದದ ಹೆಚ್.ಟಿ. ವಿದ್ಯುತ್ ಮಾರ್ಗವನ್ನು ಅಧಿಕ ಸಾಮರ್ಥ್ಯದ ವಿದ್ಯುತ್ ವಾಹಕಗಳಿಂದ ಉನ್ನತೀಕರಿಸಲಾಗಿದೆ.
2. 28,339 ಹೆಚ್ಚುವರಿ ವಿತರಣಾ ಪರಿವರ್ತಕಗಳನ್ನು ಅಳವಡಿಸಲಾಗಿದೆ.
3. 225 ಗ್ರಾಮೀಣ ಫೀಡರ್‌ಗಳಿಗೆ ಆರ್.ಎಲ್.ಎಂ.ಎಸ್. ಯೋಜನೆಯನ್ನು ಅಳವಡಿಸಲಾಗಿದೆ.

ಕುಣಿಗಲ್ ಉಪ ವಿಭಾಗ ವ್ಯಾಪ್ತಿಯಲ್ಲಿಯೂ ಸಹ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ:

1. 95 ಕಿ.ಮೀ. ಉದ್ದದ ಹೆಚ್.ಟಿ. ವಿದ್ಯುತ್ ಮಾರ್ಗವನ್ನು ಅಧಿಕ ಸಾಮರ್ಥ್ಯದ ವಿದ್ಯುತ್ ವಾಹಕಗಳಿಂದ ಉನ್ನತೀಕರಿಸಲಾಗಿದೆ.
2. 190 ಹೆಚ್ಚುವರಿ ವಿತರಣಾ ಪರಿವರ್ತಕಗಳನ್ನು ಅಳವಡಿಸಲಾಗಿದೆ.
3. 2 ಗ್ರಾಮೀಣ ಫೀಡರ್‌ಗಳಿಗೆ ಆರ್.ಎಲ್.ಎಂ.ಎಸ್. ಯೋಜನೆಯನ್ನು ಅಳವಡಿಸಲಾಗಿದೆ.

ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಕಡಿಮೆ ಮಾಡಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಶಾಖಾಧಿಕಾರಿಗಳು ಪ್ರತಿ ತಿಂಗಳು ಕಟ್ಟುನಿಟ್ಟಾದ ತಪಾಸಣೆ ನಡೆಸಿ ಕನಿಷ್ಟ 10ಕ್ಕಿಂತ ಹೆಚ್ಚು ಪ್ರಕರಣಗಳನ್ನು ಪತ್ತೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈ ಸಂಬಂಧ, ಬೆಂಗಳೂರು ವಿದ್ಯುತ್

ಸರಬರಾಜು ಕಂಪನಿಯ ಜಾಗೃತ ದಳವು ಕಾರ್ಯಾಚರಣೆ ನಡೆಸುತ್ತಿದೆ. ಇದರೊಂದಿಗೆ ಮಾಪಕ ಪರೀಕ್ಷಾ ವಿಭಾಗದವರೂ ಸಹ ತಪಾಸಣೆ ನಡೆಸುತ್ತಿದ್ದಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (323)325
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ.(ಕುಣಿಗಲ್)
ಉತ್ತರಿಸುವ ಸಚಿವರ ಹೆಸರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ಕುಣಿಗಲ್ ಪಟ್ಟಣದಲ್ಲಿ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್‌ಗಳು ಮತ್ತು ವಿದ್ಯುತ್ ವೈರುಗಳು ಅತೀ ಹಳೆಯದಾಗಿರುವುದರಿಂದ ಮುಂದೆ ವಿದ್ಯುತ್ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಳೆಯ ಉಪಕರಣಗಳನ್ನು ಬದಲಾಯಿಸಲು ಸರ್ಕಾರ ಕೂಡಲೇ ಕ್ರಮ ಕೈಕೊಳ್ಳುವುದೇ?

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕುಣಿಗಲ್ ಪಟ್ಟಣದಲ್ಲಿ ಅತೀ ಹಳೆಯದಾಗಿರುವ / ಶಿಥಿಲಗೊಂಡಿರುವ ವಿದ್ಯುತ್ ಕಂಬಗಳು ಮತ್ತು ವಿದ್ಯುತ್ ತಂತಿ ಮಾರ್ಗಗಳನ್ನು ಗುರುತಿಸಿ ಬದಲಾಯಿಸುವ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಕಳೆದ ಮೂರು ವರ್ಷಗಳಲ್ಲಿ, ಕುಣಿಗಲ್ ಪಟ್ಟಣದಲ್ಲಿ 63 ವಿದ್ಯುತ್ ಕಂಬಗಳನ್ನು ಬದಲಾಯಿಸಿರುವುದಲ್ಲದೆ 54 ಮಧ್ಯಂತರ ವಿದ್ಯುತ್ ಕಂಬಗಳನ್ನು ಸ್ಥಾಪಿಸಲಾಗಿದೆ. 15 ಕಿ.ಮೀ. ಉದ್ದದ ತಂತಿ ಮಾರ್ಗಗಳನ್ನು ಬದಲಾಯಿಸಲಾಗಿದೆ. ಸಂದರ್ಭಕ್ಕೆ/ಅಗತ್ಯತೆಗೆ ತಕ್ಕಂತೆ ಪರಿಸ್ಥಿತಿಯನ್ನು ಅವಲೋಕಿಸಿ, ಇರುವ ಹಳೆಯ / ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಮತ್ತು ವಿದ್ಯುತ್ ವಾಹಕಗಳನ್ನು ಹಂತ ಹಂತವಾಗಿ ಬದಲಾಯಿಸುವ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (324)326
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್)
ಉತ್ತರಿಸುವ ಸಚಿವರು : (ಶ್ರೀ.ವಿಶ್ವೇಶ್ವರ ಹೆಗಡೆ ಕಾಗೇರಿ)
: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ ಶಿಕ್ಷಕರ ಮತ್ತು ಸಿಬ್ಬಂದಿಗಳ ಕೊರತೆ ಹಾಗೂ ಮೂಲಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರಿನ ಅಭಾವ, ಕಾಂಪೌಂಡ್ ನಿರ್ಮಾಣ, ಪಿಠೋಪಕರಣಗಳು, ಸಮವಸ್ತ್ರ ಮತ್ತು ಪಠ್ಯಪುಸ್ತಕಗಳ ಪೂರೈಕೆ ಈ ವಿಷಯಗಳ